**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆಃ 79/2013**

ದಿನಾಂಕಃ 25.09.2024
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಪ. - 15 ಅ.ಸಾ - 10

| | | |
|---|---|---|
| ಹೆಸರು | ಃ | ಶ್ರೀ. ನವೀನ್ |
| ತಂದೆಯ ಹೆಸರು | ಃ | ಸುರೇಶ್ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ಗಾರೆ ಕೆಲಸ |
| ವಾಸಸ್ಥಳ | ಃ | ಚನ್ನೇನಹಳ್ಳಿ |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿ ನಿಪಿ-4 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು **ನಿಪಿ-4 ಬಿ** ಎಂದು ಗುರುತಿಸಲಾಯಿತು. ದಿನಾಂಕ 01.09.2012 ರ ಮಧ್ಯಾಹ್ನ ಸುಮಾರು 3.30 ರಿಂದ 3.45 ರ ಸಮಯದಲ್ಲಿ ತಾವರೆಕೆರೆ ಬಳಿಯ ಭೂತ ಬಂಗಲ ಕೆರೆಯ ಬಳಿ ಮೇಲೆ ಹೇಳಿದ ಸಹಿ ಮಾಡಿರುತ್ತೇನೆ. ಸ್ಥಳಕ್ಕೆ ತಾವರೆಕೆರೆ ಪೊಲೀಸರು ನ್ಯಾಯಾಲಯದ ಮುಂದೆ ಕುಳಿತಿರುವ ಆರೋಪಿ-1 ಮತ್ತು 2 ರವರನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಬಂದಿದ್ದರು. ಸ್ಥಳದಲ್ಲಿ ತೆಂಗಿನ ಗೊದಮೊಟ್ಟೆ ತೋರಿಸಲು ಕರೆದುಕೊಂಡು ಹೋಗಿದ್ದರು.

ಸ್ಥಳದ ಪರಿಶೀಲನೆ ಮಾಡಿ ಸ್ಥಳದಲ್ಲಿ ಸಿಕ್ಕಿದ ತೆಂಗಿನ ಗೊದಮೊಟ್ಟೆಯನ್ನು ತೆಗೆದುಕೊಂಡು ಬಂದಿರುತ್ತಾರೆ. ಆರೋಪಿ-1 ಸದರಿ ತೆಂಗಿನ ಗೊದಮೊಟ್ಟೆಯಿಂದ ಹೊಡೆದು ಕೊಲೆ ಮಾಡಿರುವುದಾಗಿ

ಹೇಳಿದರು. ಈ ಕುರಿತು ಬರವಣಿಗೆ ಮಾಡಿ ನನ್ನ ಸಹಿ ಪಡೆದರು. ಆ ದಿನ ಪೊಲೀಸರ ಜೊತೆ ಬಂದಿದ್ದ ಆರೋಪಿ ವೆಂಕಟೇಶ ಈಗ ನ್ಯಾಯಾಲಯದಲ್ಲಿ ಇದ್ದಾರೆ . ಸ್ಥಳದಿಂದ ತೆಗೆದುಕೊಂಡು ಬಂದ ತೆಂಗಿನ ಗೊದಮೊಟ್ಟೆ **ಮು.ಮಾ.6** ಇರುತ್ತದೆ.

**<u>ಪಾಟೀ ಸವಾಲುಃ ಆರೋಪಿ ಪರ ಜಿ.ಜಿ ವಕೀಲರಿಂದ</u>**

ಪಂಚನಾಮೆಗೆ ಬರಲು ಪೊಲೀಸರು ನನಗೆ ನೋಟೀಸ್ ಕೊಟ್ಟಿರಲಿಲ್ಲ. ನಾನು ಹೇಳಿದಂತೆ ಸ್ಥಳಕ್ಕೆ ಹೋಗಿಲ್ಲ, ನನ್ನ ಎದುರಿನಲ್ಲಿ ಯಾವುದೇ ವಸ್ತು ವಶಪಡಿಸಿಕೊಂಡಿಲ್ಲ ಪೊಲೀಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ. ನಾನು ದಿನಾಂಕ 01.09.2012 ರಂದು ಚೆನ್ನೆನಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಕೆಲಸ ಮಾಡುತ್ತಿದ್ದ ಜಾಗಕ್ಕೂ ಮತ್ತು ಪಂಚನಾಮೆ ಜಾಗಕ್ಕೂ ಸುಮಾರು 3 ಕಿ.ಮೀ. ದೂರ ಇತ್ತು. ನಾನು ಪಂಚನಾಮೆ ಜಾಗಕ್ಕೆ ಹೋದಾಗ ಯಾರೆಲ್ಲಾ ಇದ್ದರು ಎಂದು ಹೇಳಲು ಆಗುವುದಿಲ್ಲ.

ತೆಂಗಿನ ಗೊದಮೊಟ್ಟೆ ಸ್ಥಳಕ್ಕೆ ಕರೆದುಕೊಂಡು ಹೋಗಿ ತೋರಿಸಿದ್ದು ಬಿಟ್ಟರೆ ಈ ಪ್ರಕರಣದ ಬೇರೆ ಯಾವುದೇ ಸಂಗತಿ ನನಗೆ ಗೊತ್ತಿಲ್ಲ ಎನ್ನುವುದು ಸರಿ ಇದೆ. ಪೊಲೀಸರು ಕರೆದಾಗ ನಾನು ಠಾಣೆಗೆ ಸಹಿ ಹಾಕಲು ಬೇರೆ ಬೇರೆ ಪ್ರಕರಣಗಳಲ್ಲಿ ಹೋಗುತ್ತಿರುತ್ತೇನೆ ಎಂದರೆ ಎಲ್ಲಾ ಪ್ರಕರಣಗಳಲ್ಲಿ ಹೋಗುವುದಿಲ್ಲ, ಕೆಲವು ಪ್ರಕರಣಗಳಲ್ಲಿ ಹೋಗಿದ್ದೇನೆ. ಮು.ಮಾ. 6 ತರಹದವು ಎಲ್ಲಾ ಕಡೆ ಸಿಗುತ್ತವೆ

ಎನ್ನುವುದು ಸರಿ ಇದೆ. ನಾನು ಸಹಿ ಮಾಡಿರುತ್ತೇನೆ ಎಂದು ಹೇಳುತ್ತಿರುವುದು ಠಾಣೆಯಲ್ಲಿ ಮಾಡಿದ್ದು, ಸ್ಥಳದಲ್ಲಿ ಮಾಡಿರುವುದಿಲ್ಲ, ಪೋಲಿಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ. ಆರೋಪಿ-1 ರವರನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎನ್ನುವುದು ಸರಿ ಅಲ್ಲ.ಈ ಪ್ರಕರಣ ಕುರಿತು ಏನೋ ಗೊತ್ತಿರದೆ ಇದ್ದರು ಪೋಲಿಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

ನೀರಲ್ಲಿ ಕಾಲು ಜಾರಿ ಬಿದ್ದು ಸಾವು ಸಂಭವಿಸಿದ್ದು ನನ್ನ ಮುಂದೆ ಆರೋಪಿ-1 ಸದರಿ ತೆಂಗಿನ ಗೊದಮೊಟ್ಟೆಯಿಂದ ಹೊಡೆದು ಕೊಲೆ ಮಾಡಿರುವುದಾಗಿ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.